# ಉಪನಿರ್ದೇಶಕರ ಕಛೇರಿ,ಶಾಲಾ ಶಿಕ್ಷಣ ಇಲಾಖೆ, ಮೈಸೂರು ಜಿಲ್ಲೆ, ಮೈಸೂರು.

**10ನೇ ತರಗತಿ** **ಮಾದರಿ ಪ್ರಶ್ನೆ ಪತ್ರಿಕೆ - 2** **2024–25**

**ಸಮಯ : 03–15 ಗಂಟೆಗಳು** **ಪ್ರಥಮ ಭಾಷೆ ಕನ್ನಡ** **ಗರಿಷ್ಠ ಅಂಕ - 100**

---

**I) ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.** **6 X 1 = 6**

1. 'ರೈತ' ಪದವು ಈ ವ್ಯಾಕರಣಾಂಶಕ್ಕೆ ಸೇರಿದುದಾಗಿದೆ;
   ಎ) ರೂಢನಾಮ ಬಿ) ಅನ್ವರ್ಥನಾಮ ಸಿ) ಅಂಕಿತನಾಮ ಡಿ) ಸರ್ವನಾಮ
2. '<u>ಪಶ್ಚಿಮಘಟ್ಟದ</u> ದುರ್ಗಮ ಕಾಡುಗಳಲ್ಲಿ ಪ್ರಾಣಿಗಳ ಸಂಖ್ಯೆ ಇಳಿಮುಖವಾಗುತ್ತಿವೆ' – ವಾಕ್ಯದಲ್ಲಿ ಅಡಿಗೆರೆ ಎಳೆದಿರುವ ಪದದಲ್ಲಿರುವ ವಿಭಕ್ತಿ ಇದಾಗಿದೆ;
   ಎ) ಪ್ರಥಮ ಬಿ) ತೃತೀಯ ಸಿ) ಚತುರ್ಥಿ ಡಿ) ಪಂಚಮಿ
3. 'ನೋಡಲಿ' ಪದವು ಈ ಕ್ರಿಯಾಪದದ ರೂಪವಾಗಿದೆ;
   ಎ) ವಿದ್ಯರ್ಥಕ ಬಿ) ನಿಷೇದಾರ್ಥಕ ಸಿ) ಸಂಭಾವನಾರ್ಥಕ ಡಿ) ಆತ್ಮಾರ್ಥಕ
4. ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ ಬರೆಯುವಾಗ ಈ ಚಿಹ್ನೆಯನ್ನು ಬಳಸಲಾಗುತ್ತದೆ;
   ಎ) ಪೂರ್ಣ ವಿರಾಮ ಚಿಹ್ನೆ ಬಿ) ಅಲ್ಪವಿರಾಮ ಚಿಹ್ನೆ ಸಿ) ಉದ್ಧರಣ ಚಿಹ್ನೆ ಡಿ) ವಿವರಣಾತ್ಮಕ ಚಿಹ್ನೆ
5. ಕ್ರಿಯಾ ಸಮಾಸಕ್ಕೆ ಉದಾಹರಣೆಯಾದ ಪದವಿದು;
   ಎ) ತಲೆನೋವು ಬಿ) ಆನೆಕುದುರೆಒಂಟೆಗಳು ಸಿ) ಆ ಕಲ್ಲು ಡಿ) ಕಂಗೆಡು
6. ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನಗಳಾಗಿದ್ದರೆ ಅಂಥ ವಾಕ್ಯವನ್ನು ಹೀಗೆನ್ನುವರು;
   ಎ) ಸಾಮಾನ್ಯ ವಾಕ್ಯ ಬಿ) ಮಿಶ್ರ ವಾಕ್ಯ ಸಿ) ಸಂಯೋಜಿತ ವಾಕ್ಯ ಡಿ) ನಿಷೇದಾರ್ಥಕ ವಾಕ್ಯ

**II) ಕೊಟ್ಟಿರುವ ಪ್ರಶ್ನೆಗಳಿಗೆ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ.** **4 X 1 = 4**

7. ಸ್ಥಾನ : ತಾಣ :: ವಂಶ : ______
8. ಸರಸರನೆ : ಅನುಕರಣಾವ್ಯಯ :: ಬಟ್ಟಬಯಲು : ______
9. ಹೊಸಗನ್ನಡ : ಆದೇಶ ಸಂಧಿ :: ಸನ್ಮಾನ : ______
10. ಜಾಣತನ : ತದ್ಧಿತಾಂತ ಭಾವನಾಮ :: ಅಂಜಿಕೆ : ______

**III) ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **7 X 1 = 7**

11. ಪ್ರಾಣಿಗಳು ತಮ್ಮ ಮಕ್ಕಳಿಗೆ ಯಾವ ವಿಚಾರವಾಗಿ ತರಪೇತು ಕೊಡುತ್ತವೆ?
12. ನಾಲ್ವಡಿ ಕೃಷ್ಣರಾಜ ಒಡೆಯರು ಯಾವುದಕ್ಕಾಗಿ ಕಂಕಣಬದ್ಧರಾದರು?
13. ಗಡಿ ಪ್ರದೇಶಗಳಲ್ಲಿ 'ಬ್ಲಾಕ್ ಔಟ್' ನಿಯಮವನ್ನು ಏತಕ್ಕಾಗಿ ಪಾಲಿಸಲಾಗುತ್ತದೆ?
14. ಕೌಸಂಬಿಯ ಅರಸ ಯಾರು ?
15. ಹಕ್ಕಿಯ ಚುಂಚಗಳು ಎಲ್ಲಿಯವರೆಗೂ ಚಾಚಿವೆ?
16. ಕವಿಯು ನೋಡಿದ ಅಡಕೆಯ ತೋಟ ಎಲ್ಲಿದೆ?
17. ಪುಟ್ಟ ಪೋರಿಯ ಅಮ್ಮ ಎಲ್ಲಿ ಮಲಗಿದ್ದಾಳೆ?

**IV) ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **10 X 2 = 20**

18. ಆಂಗ್ಲ ಭಾಷೆ ವಿಶ್ವವ್ಯಾಪಿಯಾಗಲು ಕಾರಣವೇನು?
19. ಶಬರಿಯು ವರ್ಣಿಸಿರುವ ರಾಮನ ಗುಣಗಳೇನು?
20. ಆತಿಥ್ಯ ಸ್ವೀಕರಿಸಿದ ರಾಮಲಕ್ಷ್ಮಣರು ಶಬರಿಗೆ ಏನು ಹೇಳಿದರು?
21. ಸೂರ್ಯಮಿತ್ರನು ಅಗ್ನಿಭೂತಿ ವಾಯುಭೂತಿಯರಿಗೆ ವಿದ್ಯಾಭ್ಯಾಸದ ನಂತರ ಮಾವನೆಂದು ಹೇಳಲು ಕಾರಣವೇನು?
22. ಹಸುರು ಸಕಲೇಂದ್ರಿಯಗಳನ್ನು ವ್ಯಾಪಿಸಿದೆ ಎಂಬುದನ್ನು ಕವಿಯು ಹೇಗೆ ವರ್ಣಿಸಿದ್ದಾರೆ?
23. ಹಲಗಲಿಯ ಬೇಡರು ದಂಗೆ ಏಳಲು ಕಾರಣವೇನು?
24. ಭಗತ್ ಸಿಂಗ್ ಅಮರನಾದ ಬಗೆ ಹೇಗೆ?
25. ರಾಜಕೀಯ ಸ್ವಾತಂತ್ರ್ಯದ ಮಹತ್ತ್ವವೇನು?
26. ಭಗವಂತನಲ್ಲಿ ಶರಣಾಗುವ ಭಾವ ಅಕ್ಕಮಹಾದೇವಿಯ ವಚನದಲ್ಲಿ ಹೇಗೆ ವ್ಯಕ್ತಗೊಂಡಿದೆ ?

27. ಮೂರ್ಖರ ಪ್ರಕೃತಿ ಹೇಗಿರುತ್ತದೆ ಎಂದು ಶುಕನಾಸನ ಉಪದೇಶದಲ್ಲಿ ಹೇಳಲಾಗಿದೆ?

**V) ಕೆಳಗಿನ ಕವಿ/ ಸಾಹಿತಿಗಳ ಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.** **2 X 3 = 6**

28. ದೇವನೂರು ಮಹಾದೇವ

29. ರನ್ನ

**VI) ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸಿನ ಹೆಸರನ್ನು ಬರೆಯಿರಿ.** **1 X 3 =3**

30. ಭಾವಿಸಿದ ಜನಪದಂ ವಸು
ಧಾವಳಯ ವಿಲೀನ ವಿಶದ ವಿಷಯ ವಿಶೇಷಂ

**VII) ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿರಿ.** **1 X 3 =3**

31. ವೀಣೆ ನುಡಿಸುವುದರಲ್ಲಿ ಶಾಂತಲೆಯು ಸಾಕ್ಷಾತ್ ಸರಸ್ವತಿ.

**VIII) ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ.** **1 X 3 =3**

32. ಕೈ ಕೆಸರಾದರೆ ಬಾಯಿ ಮೊಸರು ಅಥವಾ ಸತ್ಯಕ್ಕೆ ಸಾವಿಲ್ಲ ಸುಳ್ಳಿಗೆ ಸುಖವಿಲ್ಲ

**IX) ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.** **6 X 3=18**

33. "ಕೈಗಾರಿಕೀಕರಣ ಇಲ್ಲವೇ ಅವನತಿ"
34. "ಆಗಲೂ ಯುದ್ಧವಾಗಿತ್ತಾ ಅಜ್ಜೀ?"
35. 'ಸರಕಾರಿ ಡಾಕ್ಟರ'ರಂತೆ ಇಲ್ಲಿ 'ಸರಕಾರಿ ವೈದಿಕರೂ' ಇರುತ್ತಾರೆ.
36. "ತಿಂಗಳೂರಿನ ನೀರನು ಹೀರಿ"
37. ""ಕೊಡುತಿವಿ ಕಬುಲ ಕೇಳರಿ ಮಾತ, ಹೋಗಬ್ಯಾಡರಿ ಸತ್ತ"
38. "ಜಲಕ್ಕನೀಗಳರಿದೆಂ ಸಿರಿ ಕಳ್ಳೊಡವುಟ್ಟಿತೆಂಬುದಂ"

**X) ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ** **1 X 4 = 4**

39. ಕೊರಳಸೆರೆ ಹಿಗ್ಗಿದವು ದೃಗುಜಲ
____________________
______________________________
____________________
____________________
ನರುಹಿ ಕೊಂದನು ಹಲವು ಮಾತೇನೆಂದು ಚಿಂತಿಸಿದ

ಅಥವಾ

ಮಾರಿಗೌತಣವಾಯ್ತು ನಾಳಿನ
____________________
______________________________
____________________
____________________
ವೀರರೈವರ ನೋಯಿಸೆನು ರಾಜೀವಸಖನಾಣೆ ॥

**XI) ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶವನ್ನು ಬರೆಯಿರಿ.** **1 X 4 = 4**

40. ಬಲ್ಲಯ್ಯ ನೃಪರಂಜಿ ತಡೆಯದೆ ರಘೂದ್ವಹನ ।
ಸೊಲ್ಗೇಳಿ ನಮಿಸಲಿಳೆಯೊಳ್ ಚರಿಸುತಧ್ವರದ ।
ನಲ್ಗುದರೆ ಬಂದು ವಾಲ್ಮೀಕಿಯ ನಿಜಾಶ್ರಮದ ವಿನಿಯೋಗದುಪವನದೊಳು ॥
ಪುಲ್ಗಳ ಪಸುರ್ಗಳಸಿ ಪೊಕ್ಕೊಡಾ ತೋಟಗಾ
ವಲ್ಗೆ ತನ್ನೊಡನಾಡಿಗಳ ಕೂಡಿ ಲೀಲೆ ಮಿಗೆ ।
ಬಿಲ್ಗೊಂಡು ನಡೆತಂದವಂ ಕಂಡನರ್ಚಿತ ಸುವಾಜಿಯಂ ವೀರಲವನು ॥

**XII) ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **2 X 4=8**

41. ಮೂರ್ತಿರಾಯರ ದೃಷ್ಟಿಯಲ್ಲಿ ಹುಲಿಯು ಬೇಟೆಯಾಡುವ ಬಗೆಯನ್ನು ವಿವರಿಸಿ.

ಅಥವಾ

ಶಾನುಭೋಗರನ್ನು ರಕ್ಷಿಸಿದುದು ಖಿರ್ದಿ ಪುಸ್ತಕವೇ? ಹುಲಿಯ ಧರ್ಮವೇ? ಸಮರ್ಥನೆಯೊಂದಿಗೆ ವಿವರಿಸಿ.

42. ನಾವು ಯಾವ ಸಂಕಲ್ಪ ಕೈಗೊಳ್ಳಬೇಕೆಂಬುದು ಕವಿ ಶಿವರುದ್ರಪ್ಪನವರ ಆಶಯ ವ್ಯಕ್ತಪಡಿಸಿದ್ದಾರೆ?

ಅಥವಾ

ಸಂಕಲ್ಪ ಮತ್ತು ಅನುಷ್ಠಾನದ ಕುರಿತು ಕವಿ ಶಿವರುದ್ರಪ್ಪನವರ ಅಭಿಪ್ರಾಯವನ್ನು ವಿವರಿಸಿ

**XIII) ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ 4 [ 2 + 2 ]**

ಸ್ವಿಜಲ್ಯಾರ್ಂಡಿನ ಗ್ರಾಮೀಣ ಜನರು ತಮ್ಮ ಊರುಗಳಲ್ಲಿ ಹಾದು ಹೋಗುವ ಹೆದ್ದಾರಿಗಳನ್ನು ದತ್ತು ತೆಗೆದುಕೊಳ್ಳುತ್ತಾರೆ ಅಂದರೆ ತಮ್ಮ ಊರಿನಲ್ಲಿ ಸಾಗುವ ಆ ಭಾಗದ ಹೆದ್ದಾರಿಯನ್ನು ಸುಂದರವಾಗಿ ಇಡುವ ಹೊಣೆಯನ್ನು ಅವರೇ ಹೊತ್ತಿರುತ್ತಾರೆ. ರಸ್ತೆಯ ಎರಡು ಕಡೆ ಹೂ ಗಿಡಗಳನ್ನು, ಅಲಂಕಾರಿಕ ವೃಕ್ಷಗಳನ್ನು ನೆಟ್ಟು, ವರ್ಷವಿಡಿ ಅವು ನಯನ ಮನೋಹರವಾಗಿ ಕಾಣುವಂತೆ ಮಾಡುತ್ತಾರೆ. ಕೊಳೆ, ತಿಪ್ಪೆಗಳಂತೂ ಇರೋದೇ ಇಲ್ಲ ಬಿಡಿ, ರಸ್ತೆ ಬದಿಯ ಕಟ್ಟೆಗಳಿಗೆ, ಬೇಲಿಗಳಿಗೆ, ತಿಪ್ಪೆಗಳಿಗೆ ಹಾಗೂ ಅಂಚೆ ಡಬ್ಬಿಗಳಿಗೆ ಸುಂದರ ಬಣ್ಣ ಬಳಿಯುತ್ತಾರೆ. ಯಾವ ಊರಿನ ರಸ್ತೆಯ ಅಂಚು ಹೆಚ್ಚು ಸುಂದರ ಎಂಬುದನ್ನು ನಿರ್ಧರಿಸುವ ಸ್ಪರ್ಧೆ ನಡೆಯುತ್ತದೆ. ನಮ್ಮಲ್ಲಿ ಸೈಕ್ಲಿಂಗ್ ಸ್ಪರ್ಧೆ ಏರ್ಪಡಿಸುವ ಹಾಗೆ ಅಮೇರಿಕಾದ ಬಾಲ್ಟಿ ಮೋರ್ ನಗರದಲ್ಲಿ ರೀ ಸೈಕ್ಲಿಂಗ್ ಸ್ಪರ್ಧೆ ನಡೆಯುವುದನ್ನು ನಾನು ನೋಡಿದ್ದೇನೆ ಅಂದರೆ ತಿಪ್ಪೆಗೆ ಬಿಸಾಕುವಂತ ತ್ಯಾಜ್ಯ ವಸ್ತುಗಳನ್ನು ಸಂಗ್ರಹಿಸಿ, ಅವುಗಳಿಂದ ಕಲಾ ಕೃತಿಗಳನ್ನು ದಿನಬಳಕೆಯ ಹೊಸ ವಸ್ತುಗಳನ್ನು ತಯಾರಿಸುವ ಸ್ಪರ್ಧೆ, ರಸ್ತೆ ಬದಿಯಲ್ಲಿ ಮೂರಾಳೆತರಕ್ಕೆ ಫಳಫಳ ಹೊಳೆಯುವ ಸುಂದರ ಶಿಲ್ಪವನ್ನು ನೋಡಿದರೆ ಅದು ಬಾಟಲಿಗಳಿಂದ ಮಾಡಿದ್ದು, ಉದ್ಯಾನದಲ್ಲಿ ಕಲಾತ್ಮಕ ಒಣಮರ ಒಂದನ್ನು ನೋಡಿದರೆ ಅದು ರದ್ದಿ ಕಾಗದದಿಂದ ಮಾಡಿದ್ದು, ಅದರ ಅಂಕುಡೊಂಕಿನ ಕೊಂಬೆಗಳ ಮೇಲೆ ಮನಮೋಹಕ ಹಕ್ಕಿ ಪಕ್ಷಿಗಳು ಕಂಡರೆ ಅವುಗಳ ಹಾರುತ್ತಿದ್ದ ರೆಕ್ಕೆಗಳು ತೆಳು ರದ್ದಿ ಪ್ಲಾಸ್ಟಿಕ್‌ನಿಂದ ತಯಾರಾದದ್ದು!

ಪ್ರಶ್ನೆಗಳು :

43. ಅ) ರಿ ಸೈಕ್ಲಿಂಗ್ ಸ್ಪರ್ಧೆ ಎಂದರೇನು?

ಆ) ಸ್ವಿಜಲ್ಯಾರ್ಂಡಿನ ರಸ್ತೆಗಳನ್ನು ಜನರು ಹೇಗೆ ರಕ್ಷಿಸುತ್ತಾರೆ?

**XIV) ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನಾಧರಿಸಿ ಪತ್ರ ಬರೆಯಿರಿ 1 X 5 = 5**

44. ನಿಮ್ಮನ್ನು ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕಿನ ದೇವನೂರು ಗ್ರಾಮದಲ್ಲಿ ವಾಸವಾಗಿರುವ 'ಅನಿತ' ಎಂದು ಭಾವಿಸಿಕೊಂಡು, ನಿಮ್ಮ ಗ್ರಾಮದಲ್ಲಿ ಶುದ್ಧ ಕುಡಿಯುವ ನೀರಿನ ಘಟಕವನ್ನು ಸ್ಥಾಪಿಸಲು ಕೋರಿ, ನಿಮ್ಮ ಶಾಸಕರಿಗೆ ಒಂದು ಮನವಿ ಪತ್ರ ಬರೆಯಿರಿ.

ಅಥವಾ

ನಿಮ್ಮನ್ನು ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲೂಕಿನ ಅರಕೆರೆಯ ಜ್ಞಾನದೀಪ ಶಾಲೆಯ ವಿದ್ಯಾರ್ಥಿ ಸುರೇಶ್ ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ಹಮ್ಮಿಕೊಂಡಿರುವ ವನಮಹೋತ್ಸವ ಕಾರ್ಯಕ್ರಮಕ್ಕೆ ಆಹ್ವಾನಿಸಿ, ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲೂಕಿನ ಜಯಪುರ ಗ್ರಾಮದಲ್ಲಿ ವಾಸವಾಗಿರುವ ಮಹಾಲಕ್ಷ್ಮಿ ಎಂಬ ಹೆಸರಿನ ತಾಯಿರವರಿಗೆ ಪತ್ರ ಬರೆಯಿರಿ.

**XV) ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆ ಇಲ್ಲದಂತೆ ಪ್ರಬಂಧ ಬರೆಯಿರಿ. 1 X 5=5**

45. ರಾಷ್ಟ್ರೀಯ ಹಬ್ಬಗಳ ಮಹತ್ವ

ಅಥವಾ

ಚಂದ್ರಯಾನ 3